**ದಿನಾಂಕಃ 19.11.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು ಃ ಪ್ರತಿವಾದಿ 6 ಮತ್ತು 7 ಪರ ಶ್ರೀ ಎಂ ಎಸ್ ಪಿ ವಕೀಲರಿಂದಃ-**

ನಾನು ಮತ್ತು ಈ ಕೇಸಿನ ಪ್ರತಿವಾದಿ 1 ರಿಂದ 5 ಒಂದೇ ಕುಟುಂಬಕ್ಕೆ ಸೇದವರು ಅಲ್ಲ ಎನ್ನುವುದು ನಿಜ. ಅದೇರೀತಿ ನಾವು ಸಂಬಂಧಿಕರು ಕೂಡ ಅಲ್ಲ ಅನ್ನುವುದು ನಿಜ. ದಾವಾ ಅನುಸೂಚಿ ನಂ.1 ಆಸ್ತಿ ಮುಲತಃ ನಾನು 1977 ರಲ್ಲಿ ಖರೀದಿಸಿದ ಜಮೀನು ಅನ್ನುವುದು ನಿಜ. ಸಾಕ್ಷಿ ಮುಂದು ವರೆದು ನಾನು ಮತ್ತು ಚಿಕ್ಕಮ್ಮ ಮುನಿಯನ್ನು ಸೇರಿ ಆಸ್ತಿ ಖರೀದಿಸಿದ್ದೇವೆ ಎಂದು ಹೇಳುತ್ತಾರೆ. ನಾವು ಖರೀದಿಸಿದ ದಾವಾ ಅನುಸೂಚಿ ನಂ.1 ಆಸ್ತಿ ಮೂಲತಃ ನಾರಾಯಣಪ್ಪನವರಿಗೆ ಸೇರಿದ್ದು ಅನ್ನುವುದು ಸರಿಯಲ್ಲ. ನಾರಾಯಣಪ್ಪನಿಗೆ ರಾಮಕೃಷ್ಣಪ್ಪ ಅನ್ನುವ ಸಹೋದರನಿದ್ದ. ಮೇಲೆ ಹೇಳಿದ ದಾವಾ ಅನುಸೂಚಿ ನಂ.1 ಆಸ್ತಿ ರಾಮಕೃಷ್ಣಪ್ಪನವರಿಗೆ ಸೇರಿದ ಆಸ್ತಿ ಏಕೆಂದರೆ ನಾವು ಅವರಿಂದ ಅದನ್ನು ಖರೀದಿಸಿದ್ದೇವೆ. ನೀವು ಎಷ್ಟು ಗುಂಟೆ ಖರೀದಿಸಿದ್ದೀರಿ ಎಂದರೆ ಸಾಕ್ಷಿಯು ಮೀಟರ್ ಲೆಕ್ಕದಲ್ಲಿ ಆಸ್ತಿ ಖರೀದಿಸಿದ್ದೇವೆ ಎಂದು ಹೇಳುತ್ತಾರೆ. ಮೇಲೆ ಹೇಳಿದ ನಾರಾಯಣಪ್ಪ, ರಾಮಕೃಷ್ಣಪ್ಪ ನವರಿಗೆ ಪ್ರತಿವಾದಿ ನಂ.1 ರಾಮಪ್ಪ ಹಾಗೂ ಟಿ. ಎಂ. ಸೀನಪ್ಪ ಅನ್ನುವ ಸಹೋದರರು ಇದ್ದರು. ಮೇಲೆ ಹೇಳಿದ ನಾರಾಯಣಪ್ಪ, ರಾಮಕೃಷ್ಣಪ್ಪ, ರಾಮಪ್ಪ ಮತ್ತು ಸೀನಪ್ಪ ಸೇರಿ ಅವರ ಕುಟುಂಬದ ಆಸ್ತಿಗಳನ್ನು 1974 ರಲ್ಲಿ ನೊಂದಾಯಿತ ದಾಖಲೆಯ ಮೂಲಕ ವಿಭಾಗಮಾಡಿಕೊಂಡಿದ್ದರು ಅನ್ನುವುದು ನಿಜ. ಸದರಿ ವಿಭಾಗದಲ್ಲಿ 4 ಮಂದಿ ಸಹೋದರರಿಗೆ ಬೇರೆ ಬೇರೆ ಆಸ್ತಿಗಳು ವಿಭಾಗದಲ್ಲಿ ಬಂದಿದೆ ಅನ್ನುವುದು ನಿಜ. ಸದರಿ ವಿಭಾಗದಲ್ಲಿ ಸರ್ವೇ ನಂ.100/3 ರಲ್ಲಿ ತಲಾ 8 ಗುಂಟೆ ಜಮೀನು 4 ಜನ ಸಹೋದರರಿಗೆ ಹಂಚಿಕೆ ಮಾಡಲಾಗಿತ್ತು ಅನ್ನುವುದು ಸರಿಯಲ್ಲ.

ಮೇಲೆ ಹೇಳಿದ ರೀತಿಯಲ್ಲಿ ಸಹೋದರರ ಮಧ್ಯೆ ವಿಭಾಗ ಆಗುವ ಪೂರ್ವ ದಲ್ಲಿ ಜುಬಾನಿ ಹಿಸ್ಸೆ ಮೂಲಕ ರಾಮಕೃಷ್ಣಪ್ಪನವರು 8 ಗುಂಟೆ ಜಮೀನಿನಲ್ಲಿ 5 ಗುಂಟೆ ಜಮೀನನ್ನು ಟಿ. ಎಂ ನಾರಾಯಾಣಪ್ಪನವರಿಗೆ ಬಿಟ್ಟುಕೊಟ್ಟಿದ್ದರು ಅನ್ನುವುದು ಸರಿಯಲ್ಲ. ಸದರಿ ಸರ್ವೇನಂಬರ್ 100/3 ರಲ್ಲಿ 1 ನೇ ಪ್ರತಿವಾದಿ ರಾಮಪ್ಪನಿಗೆ ಕೇವಲ 3 ಗುಂಟೆ ಆಸ್ತಿ ಮಾತ್ರ ಇತ್ತು ಅನ್ನುವುದು ಸರಿಯಲ್ಲ.

ಸರ್ವೇನಂಬರ್ 100/3 ರಲ್ಲಿ ಪ್ರತಿಯೊಬ್ಬ ಸಹೋದರರಿಗೆ ತಲಾ 8 ಗುಂಟೆ ಜಮೀನು ಬಂದಿತ್ತು ಎನ್ನುವುದು ಸರಿಯಲ್ಲ.

ನಾನು ರಾಮಕೃಷ್ಣಪ್ಪನವರಿಂದ 3 ಗುಂಟೆ ಜಮೀನನ್ನು ಖರೀದಿಸಿದ್ದೇನೆ ಅನ್ನುವುದು ನಿಜ. ಸಾಕ್ಷಿ ಮುಂದುವರೆದು ನಾನು ಗುಂಟೆ ಲೆಕ್ಕದಲ್ಲಿ ಜಮೀನು ಖರೀದಿಸಿಲ್ಲ ಮೀಟರ್ ಲೆಕ್ಕದಲ್ಲಿ ಜಮೀನು ಖರೀದಿಸಿದ್ದೇನೆ ಎಂದು ಹೇಳುತ್ತಾರೆ. ನನ್ನ ಜೊತೆ ಆಸ್ತಿ ಖರೀದಿಸಿದ ಮುನಿಯಮ್ಮ ನನ್ನ ಚಿಕ್ಕಮ್ಮ ಅಂದರೆ ನನ್ನ ತಂದೆಯ 2 ನೇ ಹೆಂಡತಿ. ನನ್ನ ತಂದೆ ಮೊದಲನೇ ಹೆಂಡತಿಯ ಹೆಸರು ಮುನಿಯಮ್ಮ ಎಂದು ಇರುತ್ತದೆ. ನಾನು ನನ್ನ ತಂದೆಯ ಮೊದಲನೇ ಹೆಂಡತಿಯ ಮಗನಿದ್ದೇನೆ. ಖರೀದಿ ಪತ್ರದ ಪ್ರಕಾರ ನನ್ನ ಚಿಕ್ಕಮ್ಮ ಮುನಿಯಮ್ಮನಿಗೆ ಖರೀದಿಪತ್ರದಲ್ಲಿ ಕಾಣಿಸಿ **ಎ ಶೆಡ್ಯೂಲ್** ಆಸ್ತಿ ಹಾಗೂ ನನಗೆ **ಬಿ ಶೆಡ್ಯೂಲ್** ಆಸ್ತಿ ಬಂದಿದೆ.

1998 ರಲ್ಲಿ ನಾನು ಮತ್ತು ನನ್ನ ಚಿಕ್ಕಮ್ಮ ಮುನಿಯಮ್ಮ ಸೇರಿ ಖರಿದಿಸಿದ ಆಸ್ತಿಯನ್ನು ವಿಭಾಗ ಮಾಡಿಕೊಂಡಿದ್ದೇವೆ ಅನ್ನುವುದು ನಿಜ. ನಾವು 1998 ರಲ್ಲಿ ವಿಭಾಗಮಾಡಿಕೊಂಡ ಆಸ್ತಿ ನಮ್ಮ ತಂದೆಯ ಒಟ್ಟು ಕುಟುಂಬದ ಆಸ್ತಿ ಅಲ್ಲ ಅನ್ನುವುದು ನಿಜ.

ನಮ್ಮ ಒಟ್ಟು ಕುಟುಂಬದ ಆಸ್ತಿಗಳನ್ನು ನಾನು ಮತ್ತು ನನ್ನ ಸಹೋದರ ಕೃಷ್ಣಮೂರ್ತಿ ಓಎಸ್ ನಂ.7702/1996 ರ ದಾವೆಯಲ್ಲಿ ರಾಜಿ ಮಾಡಿಕೊಂಡು ವಿಭಾಗ ಮಾಡಿಕೊಂಡಿದ್ದೇವೆ ಅನ್ನುವುದು ನಿಜ. ಓಎಸ್ ನಂ.7702/1996 ದಾವೆ ದಾಖಲು ಮಾಡುವಾಗ ದಾವಾ ಅನುಸೂಚಿ ನಂ.1 ಆಸ್ತಿ ನಿಮ್ಮ ಸ್ವಾಧೀನತೆಯಲ್ಲಿ ಇತ್ತು ಎಂದರೆ ಸಾಕ್ಷಿಯು ಅದು ನಮ್ಮ ಚಿಕ್ಕಮ್ಮನ ಸ್ವಾಧೀನತೆಯಲ್ಲಿ ಇತ್ತು ಎನ್ನುತ್ತಾರೆ. ದಾವಾ ಎ ಮತ್ತು ಬಿ ಆಸ್ತಿಗಳು ಖಾಲಿ ಇದೆ ಎಂದರೆ ಸಾಕ್ಷಿಯು ನಮ್ಮ ಚಿಕ್ಕಮ್ಮನ ಆಸ್ತಿಯಲ್ಲಿ ಸಂಪೂರ್ಣ ಕಟ್ಟಡಗಳು ಇವೆ, ನನ್ನ ಭಾಗದ ಆಸ್ತಿಯಲ್ಲಿ ಒಂದು ವಾಚ್‌ಮ್ಯಾನ್ ಶೆಡ್ ಹಾಗೂ ಕಾಂಪೌಂಡ್ ಹಾಕಿದ ಖಾಲಿ ಜಾಗ ಇದೆ ಎನ್ನುತ್ತಾರೆ. ಶೆಡಿನ ವಿಸ್ತೀರ್ಣ 250 ರಿಂದ 300 ಅಡಿ ಇದೆ. ಸದರಿ ಜಾಗ ಈಗಲೂ ನನ್ನ ಸುಪರ್ದಿಯಲ್ಲೇ ಇದೆ.

ದಾವಾ ಅನೂಸೂಚಿ ಬಿ ಆಸ್ತಿಯ ಬಗ್ಗೆ ನನ್ನ ಹೆಸರಿನಲ್ಲಾಗಲೀ ಅಥಾವ ನನ್ನ ತಂದೆಯ ಹೆಸರಿನಲ್ಲಾಗಲೀ ಯಾವುದೇ ದಾಖಲೆಗಳು ಇಲ್ಲ ಅನ್ನುವುದು ಸರಿಯಲ್ಲ. ನಾನು ಆ ರೀತಿ ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ

ಹಾಜರುಪಡಿಸಿಲ್ಲ ಅನ್ನುವುದು ಸರಿಯಲ್ಲ. **ದಾವಾ ಅನುಸೂಚಿ ಬಿ** ಆಸ್ತಿಯ ಪೂರ್ವದ ಗಡಿಯನ್ನು ರಾಮಕೃಷ್ಣಪ್ಪನವರಿಗೆ ಸೇರಿದ ಆಸ್ತಿ ಎಂದು ಕಾಣಿಸಲಾಗಿದೆ. ಸದರಿ ರಾಮಕೃಷ್ಣ ನಾನೇ ಇರುತ್ತೇನೆ. ದಾವಾ ಬಿ ಅನುಸೂಚಿ ಆಸ್ತಿಯ ದಕ್ಷಿಣ ದಿಕ್ಕಿಗೆ ರಾಮಪ್ಪನವರ ಮನೆ ಎಂದು ದಾವಾ ಪತ್ರದಲ್ಲಿ ಕಾಣಿಸಲಾಗಿದೆ ಎಂದರೆ ಸಾಕ್ಷಿಯು ರಾಮಪ್ಪ ಮತ್ತು ಮರಿಯಪ್ಪನವರ ಮನೆ ಇರುತ್ತದೆ, ಬರೆಯುವಾಗ ತಪ್ಪಾಗಿದೆ ಎಂದು ಹೇಳುತ್ತಾರೆ. ದಾವಾ ಬಿ ಅನುಸೂಚಿ ಆಸ್ತಿಯ ದಕ್ಷಿಣ ದಿಕ್ಕಿಗೆ ಇರುವ ಆಸ್ತಿಯ ನಂಬರ್ ನನಗೆ ಗೊತ್ತಿಲ್ಲ. ನನಗೆ ದಾವಾ ಬಿ ಅನುಸೂಚಿ ಆಸ್ತಿಯ ದಕ್ಷಣಕ್ಕೆ ಇರುವ ರಾಮಪ್ಪನವರ ಮನೆ ನಂಬರ್ ಗೊತ್ತಿಲ್ಲ. ದಾವಾ ಅನುಸೂಚಿ ಬಿ ಆಸ್ತಿಯಲ್ಲಿ ಹೇಳಿರುವ 4 ಅಂಗಡಿಮಳಿಗೆಗಳು ನನಗೆ ಸೇರಿದ್ದು ಇರುತ್ತವೆ. ಸದರಿ ಅಂಗಡಿ ಮಳಿಗೆಗಳನ್ನು ನಾನು ಕಟ್ಟಿಸಿಲ್ಲ, ನನ್ನ ತಂದೆ ಕಟ್ಟಿಸಿದ್ದಾರೆ. 1996 ರಲ್ಲಿ ಆದ ವಿಭಾಗಪತ್ರದಲ್ಲಿ ಈ 4 ಅಂಗಡಿ ಮಳಿಗೆಗಳ ಬಗ್ಗೆ ಉಲ್ಲೇಖ ಇಲ್ಲ.

**ಮುಂದುವರೆದ ಪಾಟೀಸವಾಲಿಗೆ ಸಮಯ ಕೇಳಿದ್ದರಿಂದ, ಸಾಕ್ಷಿಯು ಮುಂದುವರೆದ ಪಾಟೀಸವಾಲನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

**(ಪದ್ಮ ಪ್ರಸಾದ್ )**
**2 ನೇ ಅಪರ ನಗರ ಸಿವಿಲ್ ಮತ್ತು**
**ವಿಶೇಷ ನ್ಯಾಯಾಧೀಶರು, ಬೆಂಗಳೂರು ನಗರ.**